**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.10/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | ಜಗದೀಶ್ ಹೆಚ್.ಎಸ್ | ಸಿ.ಡಬ್ಲೂ: 8 | ಪಿ.ಡಬ್ಲೂ: 6 |
| ತಂದೆಯ ಹೆಸರು | ಸುಂದರ್ ಸ್ವಾಮಿ ಹೆಚ್ | | |
| ವಯಸ್ಸು | 56 ವರ್ಷ | | |
| ಉದ್ಯೋಗ | ಹಿರಿಯ ಮೋಟರ್ ವಾಹನ ನಿರೀಕ್ಷಕ, ಹೊಸಪೇಟೆ, ವಿಜಯನಗರ ಜಿಲ್ಲೆ | | |
| ವಾಸ ಸ್ಥಳ | ಹೊಸಪೇಟೆ | | |

ದಿನಾಂಕ: 21.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ಸಾಕ್ಷಿ ಜಿಟ್ಸಿ ಆ್ಯಪ್ ಮೂಲಕ ವಿಡಿಯೋ ಕಾನ್‌ಪೆರೆನ್ಸ್ ಮೂಲಕ ಆರ್.ಟಿ.ಒ ಕಚೇರಿ ವಿಜಯನಗರ ಜಿಲ್ಲೆ, ಹೊಸಪೇಟೆಯಿಂದ ಹಾಜರಾಗಿದ್ದು. ಸದರಿ ಕಚೇರಿಯಲ್ಲಿ ಎಫ್.ಡಿ.ಎ ಆಗಿರುವ ರಾಜು ಕಬಾಡಿ ರವರನ್ನು ಕೋ ಆರ್ಡಿನೇಟರ್ ಆಗಿ ನೇಮಿಸಿಕೊಳ್ಳಲಾಯಿತು.

2. ನಾನು ದಿ: 01.04.2023 ರಿಂದ ದಿ: 05.07.2025 ರವರೆಗೆ ಮೋಟರ್ ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

3. ದಿ: 16.10.2024 ರಂದು ಗೋಣಿಬೀಡು ಪೊಲೀಸ್ ಠಾಣೆಯಿಂದ ನನಗೆ ವಾಹನ ಸಂಖ್ಯೆ ಕೆ.ಎ.05/ಎಂ.ಎ.3929 ಹಾನಿಯಾದ ಬಗ್ಗೆ windscreen ಹೊಡೆದ ಬಗ್ಗೆ ಅಂದಾಜು ಮೌಲ್ಯವನ್ನು ಕೇಳಿದ್ದರು. ನಾನು ಗೋಣಿಬೀಡು ಪೊಲೀಸ್ ಠಾಣೆಗೆ ದಿ: 17.10.2024 ರಂದು ಭೇಟಿ ನೀಡಿ ಹಾನಿಯಾದ ಕಾರಿನ ಗಾಜನ್ನು ಪರಿಶೀಲಿಸಿ ಅದರ ಅಂದಾಜು ಮೌಲ್ಯವನ್ನು ರೂ.4,750-00 ಎಂದು ಅಂದಾಜಿಸಿರುತ್ತೇನೆ. ಚಿಕ್ಕಮಗಳೂರಿನ ಮಾರುತಿ ಶೋ ರೂಮ್ ರವರಿಂದ ಕಾರಿನ ಗಾಜಿನ ಮೌಲ್ಯವನ್ನು ತಿಳಿದುಕೊಂಡು ಮೌಲ್ಯವನ್ನು

ತಿಳಿಸಿರುತ್ತೇನೆ. ಸಾಕ್ಷಿ ತಾನು ನೀಡಿದ ಹಾನಿಯಾದ ಕಾರಿನ ಗಾಜಿನ ಮೌಲ್ಯದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಪರಿಶೀಲಿಸಿದ ವಾಹನವನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ನಿ.ಪಿ.3 ಛಾಯಚಿತ್ರದಲ್ಲಿ ಇರುವ ವಾಹನವನ್ನೇ ಆ ದಿನ ಪರಿಶೀಲಿಸಿದ್ದೆ.

<u>ಪಾಟೀ ಸವಾಲು ಶ್ರೀಮತಿ ಬಿ.ಜಿ.ಎನ್ ವಕೀಲರಿಂದ – ಆರೋಪಿತನ ಪರವಾಗಿ</u>

4. ನಾನು ಪರಿಶೀಲಿಸಿದಾಗ ಕಾರಿನ ಎದುರಿಗೆ ನಿಂತರೆ ಮುಂಭಾಗದ ಎಡಬದಿಯ ಗಾಜು ಹಾನಿಯಾಗಿತ್ತು. ಕಾರನ್ನು ಪರಿಶೀಲಿಸುವಾಗ ಕಾರಿನ ಎದುರು ನಿಂತು ಛಾಯಚಿತ್ರವನ್ನು ತೆಗೆಸಿಲ್ಲ. ದಿಃ 17.10.2024 ರಂದು ನಾನು ವರದಿಯನ್ನು ಪೊಲೀಸರಿಗೆ ನೀಡಿರುತ್ತೇನೆ. ನಾನು ಠಾಣೆಗೆ ಭೇಟಿ ನೀಡಿ ಯಾವುದೇ ಕಾರನ್ನು ಪರಿಶೀಲಿಸಿಲ್ಲ, ಸುಳ್ಳು ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಗೆ ಭೇಟಿ ನೀಡಿ ಪರಿಶೀಲಿಸಿದ್ದರೆ ಕಾರಿನ ಜೊತೆ ನಿಂತು ಛಾಯಚಿತ್ರವನ್ನು ತೆಗೆಸುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ**</u> ಇಲ್ಲ

<u>ಸಾಕ್ಷಿಗೆ ಮತ್ತು ಕೋ ಆರ್ಡಿನೇಟರ್ ಆದ ಎಫ್.ಡಿ.ಎ ಆಗಿರುವ ರಾಜು ಕಬಾಡಿ ರವರಿಗೆ ಸಾಕ್ಷಿಯ ಸಾಕ್ಷ್ಯವನ್ನು ಪಿ.ಡಿ.ಎಫ್. ಫಾರ್ಮೇಟ್ ಮೂಲಕ ಇ ಮೇಲ್ ಕಳಿಸುವುದಾಗಿ ಮತ್ತು ಸದರಿ ಪಿ.ಡಿ.ಎಫ್ ಫಾರ್ಮೇಟ್ ನ ಪ್ರಿಂಟ್ ತೆಗೆದು ಸಹಿ ಮಾಡಿ ಅದರ **scanned** ಪ್ರತಿಯನ್ನು ನ್ಯಾಯಾಲಯದ ಇ ಮೇಲೆ ವಿಳಾಸಕ್ಕೆ ಇ ಮೇಲ್ ಮಾಡುವಂತೆ ಮತ್ತು **hard copy** ಯನ್ನು ನ್ಯಾಯಾಲಯದ ವಿಳಾಸಕ್ಕೆ ತಕ್ಷಣ ಅಂಚೆ ಮೂಲಕ ಕಳುಹಿಸಿಕೊಡುವಂತೆ ಸೂಚಿಸಲಾಯಿತು.</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಕೋ ಆರ್ಡಿನೇಟರ್ ಸಹಿ

ಮಾ